# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ.ನಾಗರಾಜು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 526**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹಾಲು ಉತ್ಪಾದಕರಿಗೆ ಸರಳ ನಿಬಂಧನೆಗಳೊಂದಿಗೆ ಸಾಲ ಸೌಲಭ್ಯಗಳನ್ನು ನೀಡಲು ಉದ್ದೇಶಿಸಿರುವ 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ಸ್ಥಾಪನೆ ಯಾವ ಹಂತದಲ್ಲಿದೆ:<br>(ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಒ 60 ಸಿಸಿಬಿ 2022ರನ್ವಯ ದಿನಾಂಕ: 23-03-2022 ರಂದು "ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸಲು ಅನುಮೋದನೆ ನೀಡಿ ಆದೇಶಿಸಲಾಗಿತ್ತು.<br><br>ಈ ಸಂಬಂಧ ದಿನಾಂಕ: 21-07-2022 ರಂದು ಬ್ಯಾಂಕ್ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ಕೆ.ಎಂ.ಎಫ್.ನ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ದಿನಾಂಕ:25-07-2022 ರಂದು ಮುಂದಿನ ಕ್ರಮಕ್ಕಾಗಿ ಆರ್.ಬಿ.ಐ.ಗೆ ಸಲ್ಲಿಸಲಾಗಿತ್ತು. ಆರ್.ಬಿ.ಐ ಈ ಸಂಬಂಧ ದಿನಾಂಕ: 25-07-2022 ರಂದು ಸರ್ಕಾರಕ್ಕೆ ಪತ್ರ ಬರೆದು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಕುರಿತು ಆರ್. ಬಿ.ಐ ಕಾಯ್ದೆಯಲ್ಲಿನ ಅವಕಾಶಗಳಲ್ಲಿರುವ ತೊಡಕುಗಳನ್ನು ಉಲ್ಲೇಖಿಸಿ ಆರ್‌ಬಿಐ ಅವಕಾಶಗಳಿಗೆ ಅನುಗುಣವಾಗಿ ಮರುಪ್ರಸ್ತಾವೆ ಸಲ್ಲಿಸುವ ಕುರಿತು ನಿರ್ಣಯ ತೆಗೆದುಕೊಳ್ಳಲು ಸೂಚಿಸಿ ಪ್ರಸ್ತಾವೆಯನ್ನು ಹಿಂದಿರುಗಿಸಿರುತ್ತಾರೆ.<br><br>ಮುಂದುವರೆದು, ಕ್ಷೀರ ಸಮೃದ್ಧಿ ಬ್ಯಾಂಕ್ ರಚಿಸುವ ಸಂಬಂಧ ಹಿಂದಿನ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ ಬರೆದ ಪತ್ರವನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಿಂದ ಪ್ರಸ್ತುತ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಂತರ ಅವಶ್ಯವಿದ್ದಲ್ಲಿ ಕಡತವನ್ನು ಸಲ್ಲಿಸುವಂತೆ ಸೂಚಿಸಿ ಹಿಂದಿರುಗಿಸಿರುತ್ತಾರೆ. |

**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 625**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಸಂಘಗಳಲ್ಲಿ ಹೆಚ್ಚುವರಿಯಾಗಿ ಉಳಿಕೆಯಾಗುವ ನಿಧಿಯನ್ನು ಸಹಕಾರ ಕಲ್ಯಾಣ ನಿಧಿಗೆ ವರ್ಗಾಯಿಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳಲ್ಲಿ ಅವಕಾಶವಿದ್ದು, ಈ ರೀತಿ ಆರಂಭದಿಂದ ಇದುವರೆಗೂ ಸಂಗ್ರಹಿಸಲಾದ ಒಟ್ಟು ನಿಧಿಯ ಮೊತ್ತವೆಷ್ಟು; | ಸಹಕಾರ ಅಭಿವೃದ್ಧಿ ನಿಧಿ ಖಾತೆಗೆ ಆರಂಭದಿಂದ ಇದುವರೆಗೂ ಬಡ್ಡಿ ಸೇರಿ ಒಟ್ಟು ರೂ.24,70,33,825/- ಗಳು ಸಂಗ್ರಹವಾಗಿರುತ್ತದೆ. |
| ಆ) | ಈ ನಿಧಿ ಸಂಗ್ರಹಣೆ ಪ್ರಾರಂಭದ ದಿನಾಂಕದಿಂದ ಇದುವರೆವಿಗೂ ಯಾವ ಯಾವ ಉದ್ದೇಶಗಳಿಗೆ ಬಳಸಲಾಗಿದೆ; (ವಿವರಗಳನ್ನು ನೀಡುವುದು) | ಈ ನಿಧಿ ಸಂಗ್ರಹಣೆ ಪ್ರಾರಂಭದಿಂದ ಇದುವರೆಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 24(2)(ಸಿ)ರನ್ವಯ ಕಟ್ಟಡ ನಿರ್ಮಾಣ, ವಾಹನಗಳ ಅರ್ಜನೆ ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡ ಮೂಲ ಸೌಕರ್ಯಗಳ ಸೃಜನ ಕಾರ್ಯಗಳಿಗೆ ಬಳಸಲಾಗಿದೆ. (ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.) |
| ಇ) | ಈ ನಿಧಿಯ ಹಣವನ್ನು ಬಳಸಿಕೊಳ್ಳಲು ಪಾರದರ್ಶಕ ಮಾನದಂಡಗಳನ್ನು ಪಾಲಿಸಲಾಗಿದೆಯ; | ಈ ನಿಧಿಯ ಹಣವನ್ನು ಬಳಸಿಕೊಳ್ಳಲು ಪಾರದರ್ಶಕ ಮಾನದಂಡಗಳನ್ನು ಪಾಲಿಸಲಾಗಿದೆ. |
| ಈ) | ಈ ನಿಧಿಯ ಹಣವನ್ನು ಬಳಸಿಕೊಂಡ ನಂತರ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಲಾಗಿದೆಯೆ? | ಈ ನಿಧಿಯ ಹಣವನ್ನು ಬಳಸಿಕೊಂಡ ನಂತರ ಲೆಕ್ಕಪತ್ರಗಳನ್ನು ಮಹಾಲೇಖಪಾಲರ ಪರಿವೀಕ್ಷಣೆಗೆ ಒಳಪಡಿಸಲಾಗಿದೆ. |

**ಸಂಖ್ಯೆ: ಸಿಒ 74 ಪಿಎಂಸಿ 2023**

K. N. Rajanna

**(ಕೆ.ಎನ್.ರಾಜಣ್ಣ)**

ಸಹಕಾರ ಸಚಿವರು

## ಅನುಬಂಧ -1

**ಸಹಕಾರ ಅಭಿವೃದ್ಧಿ ನಿಧಿ ಖಾತೆಯಿಂದ ಬಿಡುಗಡೆ ಮಾಡಿರುವ ವಿವರ**

| ಕ್ರ.ಸಂ | ವಿವರ | ದಿನಾಂಕ | ಮೊತ್ತ |
|---|---|---|---|
| 1 | ವಾಹನ ಖರೀದಿ, ನಿಬಂಧಕರು ಹಾಗೂ ವಿಶೇಷ ಕರ್ತವ್ಯಾಧಿಕಾರಿ | 21-01-2011 | 11,78,819.00 |
| 2 | ವಾಹನಗಳ ವಿಮೆ | 14-02-2011 | 37,138.00 |
| 3 | ವಾಹನ ಖರೀದಿ ತೆರಿಗೆ | 06-03-2015 | 5,607.00 |
| 4 | ವಾಹನ ಖರೀದಿ ನಿಬಂಧಕರ ಕಛೇರಿಗೆ | 06-03-2015 | 19,95,840.00 |
| 5 | ಕಟ್ಟಡ ನಿರ್ಮಾಣ (ಸಹಕಾರ ಸೌಧ) | 15-05-2015 | 5,79,879.00 |
| 6 | ವಾಹನ ಖರೀದಿ, ನಿಬಂಧಕರ ಕಛೇರಿಗೆ | 15-09-2015 | 15,89,358.00 |
| 7 | ವಾಹನ ಖರೀದಿ, ನಿಬಂಧಕರ ಹಾಗೂ ಜಂಟಿ ನಿಬಂಧಕರ ಕಛೇರಿಗಳಿಗೆ | 05-11-2015 | 33,01,172.00 |
| 8 | ವಾಹನ ವಿಮೆ (ಕ್ರ.ಸಂ.7 ರ ಸಂಬಂಧ) | 03-12-2015 | 1,03,720.00 |
| 9 | ವಾಹನ ಖರೀದಿ, ಜಂಟಿ ನಿಬಂಧಕರು ಕಲಬುರಗಿ ಪ್ರಾಂತ | 28-11-2016 | 5,61,325.00 |

| | | | |
|---|---|---|---|
| 10 | ವಾಹನ ಖರೀದಿ,ಜಂಟಿ ನಿಬಂಧಕರು ಕಲಬುರಗಿ ಪ್ರಾಂತ | 16-05-2017 | 6,91,304.00 |
| 11 | ವಾಹನ ಖರೀದಿ, ಜಂಟಿ ನಿಬಂಧಕರು ಕಲಬುರಗಿ ಪ್ರಾಂತ | 17-05-2017 | 6,90,297.00 |
| 12 | ಪತ್ರಿಕಾ ಪ್ರಕಟಣೆ (ಕಾಫಿ ಸಂಸ್ಕರಣ ಸಂಘ | 06-01-2018 | 54,031 |
| 13 | ಸ್ಥಿರಾಸ್ತಿಯನ್ನು ಸರ್ಕಾರಕ್ಕೆ ವರ್ಗಾಯಿಸಲು (ಕೋಲಾರ) | 12-03-2020 | 2,51,543.00 |
| 14 | ವಾಹನ ಖರೀದಿ, ನಿಬಂಧಕರ ಕಛೇರಿಗೆ (ತೆರಿಗೆ) | 21-01-2021 | 22,08,403 |
| 15 | ವಾಹನ ಖರೀದಿ (ಕ್ರಮ ಸಂಖ್ಯೆ 14 ರ ಸಂಬಂಧ ವಿಮೆ) | 04-02-2021 | 30,229.00 |
| 16 | (ಕ್ರಮ ಸಂಖ್ಯೆ 14 ರ ಸಂಬಂಧ ವಿಮೆ) | 20-02-2021 | 15,099.00 |
| 17 | (ಕ್ರಮ ಸಂಖ್ಯೆ 14 ರ ಸಂಬಂಧ ವಿಮೆ) | 04-03-2021 | 77,714.00 |
| 18 | ವಾಹನ ಖರೀದಿ ನಿಬಂಧಕರ ಕಛೇರಿ ಹಾಗೂ ಸರ್ಕಾರದ ವಿಶೇಷ ಕರ್ತವ್ಯಾಧಿಕಾರಿ | 17-09-2022 | 14,02,783.00 |

| | | | |
|---|---|---|---|
| 19 | ವಾಹನ ಖರೀದಿ ವಿಮಾ(ಕ್ರ.ಸಂ.18 ರ ಸಂಬಂಧ) | 28-09-2022 | 51,163.00 |
| 20 | ವಾಹನ ಖರೀದಿಗೆ ವಿಮಾ | 12-10-2022 | 5,33,013.00 |
| 21 | ವಾಹನ ನೊಂದಣಿಗೆ | 18-10-2022 | 28,206.00 |
| 22 | ನಿಬಂಧಕರ ಕಛೇರಿ ಆವರಣದ ಕಾಮಗಾರಿ | 27-10-2022 | 43,00,000.00 |
| 23 | ವಾಹನ ಖರೀದಿ ನಿಬಂಧಕರ ಕಛೇರಿಗೆ | 08-11-2022 | 1,33,43,277.87 |
| 24 | ರಾಯಚೂರು ಉ.ನಿ.ಕಛೇರಿ ಕಾಂಪೌಂಡ್ ನಿರ್ಮಾಣ | 15-03-2023 | 1,20,000.00 |
| 25 | ಬಾಗಲಕೋಟೆ ಜಿಲ್ಲಾ ನಿಬಂಧಕರ ಕಛೇರಿ ನಿರ್ಮಾಣ | 18-03-2023 | 50,00,000.00 |
| 26 | ಸಹಕಾರ ಸಮೃದ್ಧಿ ಕಛೇರಿ ನಿರ್ಮಾಣ | 21-03-2023 | 3,28,00,000.00 |
| 27 | ನಿಬಂಧಕರ ಕಛೇರಿ ಅನೆಕ್ಸ್ ಕಟ್ಟಡ ನಿರ್ಮಾಣ | 07-06-2023 | 35,10,000.00 |
| | ಒಟ್ಟು | | **7,44,59,920.87** |